34.	ಆರಕ್ಷಕ ಉಪಾಧೀಕ್ಷಕರು, ಬೆಳಗಾಂ.	ಬಿಜಾಪುರ, ಬೆಳಗಾಂ ಜಿಲ್ಲೆ.
35.	ಆರಕ್ಷಕ ನಿರೀಕ್ಷಕರು ಬೆಳಗಾಂ.	ಬೆಳಗಾಂ ಜಿಲ್ಲೆ ವ್ಯಾಪ್ತಿ.
36.	ಆರಕ್ಷಕರ ನಿರೀಕ್ಷಕರು ಧಾರವಾಡ.	ಧಾರವಾಡ ಜಿಲ್ಲೆ.
37.	ಆರಕ್ಷಕ ನಿರೀಕ್ಷಕರು ಬಿಜಾಪುರ.	ಬಿಜಾಪುರ ಜಿಲ್ಲೆ.
38.	ಆರಕ್ಷಕ ನಿರೀಕ್ಷಕರು, ಬಾಗಲಕೋಟೆ.	ಬಾಗಲಕೋಟೆ ಜಿಲ್ಲೆ.
39.	ಆರಕ್ಷಕ ನಿರೀಕ್ಷಕರು, ಚಿಕ್ಕಮಗಳೂರು.	ಚಿಕ್ಕಮಗಳೂರು ಜಿಲ್ಲೆ.
40.	ಆರಕ್ಷಕ ನಿರೀಕ್ಷಕರು, ಕಾರವಾರ.	ಕಾರವಾರ ಜಿಲ್ಲೆ.
41.	ಆರಕ್ಷಕ ನಿರೀಕ್ಷಕರು ಮಂಗಳೂರು.	ಮಂಗಳೂರು ಜಿಲ್ಲೆ.

(ಆ) ರಾಜ್ಯದ ಎಲ್ಲಾ ಜಿಲ್ಲಾ ಪತ್ರ ನ್ಯಾಯಾಲಯಗಳನ್ನು ವಿಶೇಷ ನ್ಯಾಯಾಲಯಗಳೆಂದು ಲೋಕಾಯುಕ್ತ ಪ್ರಕರಣಗಳನ್ನು ವ್ಯವಹರಿಸಲು ಪದನಾಮಕರಿಸಲಾಗಿದೆ.

ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನಿರ್ಮಾಣ

1882 (2507) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ):

ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಸಿಕ್ಕಿದೆಯೆ;

(ಅ) ಸಿಕ್ಕಿದ್ದರೆ, ಈ ಕಾಮಗಾರಿ ಯಾವಾಗ ಪ್ರಾರಂಭವಾಗುವುದು;

(ಇ) ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ ಮಾಡುವ ಈ ವಿಮಾನ ನಿಲ್ದಾಣಕ್ಕೆ ಖಾಸಗಿ ಅಥವಾ ಜಂಟಿ ಕ್ಷೇತ್ರದಲ್ಲಿ ಹಾಕಿರುವ ಷರತ್ತುಗಳೇನು;

(ಈ) ಈ ವಿಮಾನ ನಿಲ್ದಾಣದ ನಿರ್ಮಾಣದಿಂದ ಭೂಮಿಯನ್ನು ಕಳೆದುಕೊಳ್ಳುವ ರೈತರಿಗೆ ಪರಿಹಾರ ಕೊಟ್ಟಿದೆಯೇ; ಭೂಮಿಯನ್ನು ಕಳೆದುಕೊಳ್ಳುವ ರೈತರಿಂದ ದೂರುಗಳೇನಾದರೂ ಸರ್ಕಾರಕ್ಕೆ ಬಂದಿವೆಯೆ?

ಶೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲ ಅಭಿವೃದ್ಧಿ ಸಚಿವರು)

(ಅ) ಸಿಕ್ಕಿದೆ. ಭಾರತ ಸರ್ಕಾರವು ಬೆಂಗಳೂರು ಬಳಿಯ ದೇವನಹಳ್ಳಿಯಲ್ಲಿ ಅಂತರ ರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣ ಸ್ಥಾಪನೆಗಾಗಿ ತತ್ವಶಃ ಮಂಜೂರಾತಿ ನೀಡಿದೆ.

(ಆ) ಜಂಟಿ ವಲಯ ಪಾಲುದಾರರ (ಜೆವಿಪಿ) ಆಯ್ಕೆ ಕಾರ್ಯಾಚರಣೆಯು ಸಧ್ಯದಲ್ಲಿ ಮುಂದುವರೆದಿದೆ. ಜಮೀನಿನ ಸ್ವಾಧೀನ ಕಾರ್ಯವು ಪೂರ್ಣ ಹಂತದಲ್ಲಿದೆ. ಮೇಲ್ದಂಡ ಸದ್ಯದ ಸ್ಥಿತಿಗನುಗುಣವಾಗಿ ಅರ್ಹವುಳ್ಳ ಸವಾಲುದಾರ: ಹರಾಜಿನಲ್ಲಿ ಪಾಲ್ಗೊಂಡವರಲ್ಲಿ : ಕಂಪನಿಗಳವರಲ್ಲಿ ಮೊಟಕುಗೊಳಿಸುವ ಕಾರ್ಯಾಚರಣೆಯು ಜುಲೈ ಮಾಹೆ 2000 ರೊಳಗೆ ಪೂರ್ಣಗೊಳ್ಳಲಿದೆ. ಜಂಟಿ ವಲಯದ ಪಾಲುದಾರರ ಆಯ್ಕೆಯಾದ ನಂತರದ 36 ತಿಂಗಳೊಳಗೆ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗುವ ನಿರೀಕ್ಷೆ ಇದೆ.

(ಇ) ಭಾರತ ಸರ್ಕಾರವು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾಪನೆಗಾಗಿ ಈ ಕೆಳಕಂಡ ಇನ್ಸ್ಟಿಟ್ಯೂಷನಲ್ ಚೌಕಟ್ಟಿನಂತೆ ತತ್ವಶಃ ಒಪ್ಪಿಗೆ: ಸಮ್ಮತಿ ನೀಡಿದೆ:

ಇನ್ಸ್ಟಿಟ್ಯೂಷನಲ್ ಫ್ರೇಂ ವರ್ಕ್:

ಬೆಂಗಳೂರು ಸಮೀಪ ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ನಿರ್ಮಿಸುವ ಸಲುವಾಗಿ ಎಎಐ ಹಾಗೂ ಕೆಎಸ್ಐಐಡಿಸಿ. ನಡುವೆ ಒಂದು ತಿಳುವಳಿ ಜ್ಞಾಪನಾ ಪತ್ರಕ್ಕೆ (ಎಂಒಯು) ಸಹಿ ಹಾಕಿದ್ದು, ಜಂಟಿ ವಲಯದ ಕಂಪೆನಿಯಾಗಲು ಎಎಐ, ಕೆಎಸ್ಐಐಡಿಸಿ ಮತ್ತು ಆಯಕ್ಕಟ್ಟಿನ ಪಾಲುದಾರ:ಮುಖ್ಯ ಪ್ರವರ್ತಕರಿರುತ್ತಾರೆ. ಈ ಯೋಜನೆ ಕಾರ್ಯಗತಗೊಳ್ಳಲು ಜಂಟಿ ವಲಯದ ಕಂಪನಿಯಾಗಿ (ಜೆವಿಸಿ) ತನ್ನ ಮಂಡಳಿಯಲ್ಲಿ ಎಎಐ ಮತ್ತು ಕೆಎಸ್ಐಐಡಿಸಿ. ಯ ಈಕ್ವಿಟಿಗನುಸಾರವಾಗಿ ನಾಮ ನಿರ್ದೇಶಿತರನ್ನು ಪ್ರತಿನಿಧಿಸಿರುತ್ತದೆ. ಈ ಪ್ರಸ್ತುತ ಜೆವಿಸಿ.ಯಲ್ಲಿ ಕೆಎಸ್ಐಐಡಿಸಿ ಮತ್ತು ಎಎಐ. ಗಳೆರಡೂ ಶೇಕಡ 26ಕ್ಕಿಂತಲೂ ಕಡಿಮೆ ಇಲ್ಲದ ಈಕ್ವಿಟಿ ಹೋಲ್ಡಿಂಗ್ ಹೊಂದಲಿದ್ದು, ಉಳಿದ ಶೇಕಡ 74 ಈಕ್ವಿಟಿಯು ಆಯ್ಕೆಗೊಳ್ಳಲಿರುವ ಅರ್ಹ ಖಾಸಗಿ ಕ್ಷೇತ್ರದ ಪಾಲುದಾರರಿಂದ ತೊಡಗಿಸಲಾಗುವುದು.

(ಈ) ಜಮೀನುಗಳ ವಾಸ್ತವ ಸ್ವಾಧೀನವನ್ನು ಪಡೆಯದೆ ಇರುವುದರಿಂದ ಪರಿಹಾರ ಹಣವನ್ನು ಪಾವತಿಸಿರುವುದಿಲ್ಲ. ಕೆಲವೊಂದು ರೈತರಿಂದ ಭೂಸ್ವಾಧೀನದ ಬಗ್ಗೆ ದೂರುಗಳು ಬಂದಿವೆ.